Geetha Shishu Shikshana Sangha (R)
GSSS SIMHA SUBBAMAHALAKSHMI FIRST GRADE COLLEGE
KRS ROAD, MYSURU-570 016

# ಯಶಸ್ YASHAS SSFGC Monthly Newsletter

Volume 4 Issue No. 5 May 2022

## Appointment of Principal and Faculty members

Dr. Rakesh T.S assumed office as the new Principal of GSSS First Grade College effective from the 6th of May 2022. The new faculty members – Ms. Divya R, Assistant Professor, Dept of Commerce, Ms. Poornima N, Assistant Professor, Dept of Commerce, Ms. Latha M G, Assistant Professor, Dept of Computer Applications, Ms. Kamsala Pooja, Assistant Professor, Dept of Management, Ms. Shruthi S, Assistant Professor, Dept of Computer Applications, Ms. Rashmi C R, Assistant Professor, Dept of Kannada and Mr. Ankaraju N, Asst Librarian also assumed office effective 6th May 2022. The staff were inducted by Smt. Anupama B Pandit, Administrative Officer, GSSS(R).

## ಕನ್ನಡ ಭಾಷೆ ಮತ್ತು ಸಂಸ್ಕೃತಿ



ಕನ್ನಡ ಭಾಷೆಯ ಪ್ರಾಚೀನತೆಯ ಗಮನಹರಿಸಿದರೆ ಕ್ರಿಸ್ತಶಕ 150ರಷ್ಟು ಹಳೆಯದು ಎಂಬುದು ನಮಗೆಲ್ಲ ತಿಳಿದಿರುವ ಸಂಗತಿ. ಪ್ರತಿಯೊಂದು ಭಾಷೆಯು ತನ್ನದೇ ಆದ ಸುದೀರ್ಘ ಇತಿಹಾಸ ಒಳಗೊಂಡಿರುವಂತೆ ನಮ್ಮ ಕನ್ನಡ ಭಾಷೆಗೂ ಸಹ ಅದರದೇ ಇತಿಹಾಸ ಒಳಗೊಂಡಿದೆ. ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಅನೇಕ ರಾಜಮನೆತನಗಳು ಕನ್ನಡ ಭಾಷೆಯ ಕುರಿತು ಪ್ರಮುಖ ದಾಖಲೆಗಳಾಗಿವೆ. ಕ್ರಿಸ್ತಶಕ 450 ರಲ್ಲಿ ದೊರೆತ ಹಲ್ಮಿಡಿ ಶಾಸನದಿಂದ ಇಂದಿನವರೆಗೂ ನಮ್ಮ ಭಾಷೆ ಹಂತಹಂತವಾಗಿ ಹೇಗೆ ಬೆಳೆದು ಬಂದಿದೆ ಎಂಬುದನ್ನು ಪರಿಗಣಿಸಿದರೆ ಕನ್ನಡ ಭಾಷೆಯ ಮಹತ್ವ, ಘನತೆ ಮತ್ತು ಹಿರಿಮೆಯನ್ನು ತಿಳಿಯಬಹುದು.

ದೇಶದ ಯಾವುದೇ ಮೂಲೆಯ ಯಾವುದೇ ಭಾಷೆಯನ್ನು ಗಮನಿಸಿದರು ನಮಗೆ ಕಂಡುಬರುವ ಒಂದು ಪ್ರಮುಖ ಅಂಶವೆಂದರೆ ಭಾಷೆ ಮತ್ತು ಸಂಸ್ಕೃತಿ ಒಂದಕ್ಕೊಂದು ಸಂಬಂಧವನ್ನು ಹೊಂದಿವೆ ಎಂಬುದು. ನಮ್ಮ ನಾಡನ್ನು ಆಳಿದ ರಾಜವಂಶಗಳಾದ ಬನವಾಸಿಯ ಕದಂಬರಿಂದ ಮೈಸೂರು ಒಡೆಯರವರೆಗೂ ಭಾಷೆ ಮತ್ತು ಸಂಸ್ಕೃತಿಗೆ ಇವರುಗಳು ನೀಡಿದ ಕೊಡುಗೆ ಅವಿಸ್ಮರಣೀಯ. ಯಾವುದೇ ಒಂದು ಭಾಷೆಯು ತನ್ನ ಸಂಸ್ಕೃತಿಯನ್ನು ಹೊರತುಪಡಿಸಿ ಬೆಳೆಯಲು ಸಾಧ್ಯವಿಲ್ಲ ಸಮಾಜವನ್ನು ಹೊರತುಪಡಿಸಿ ಮಾನವ ಬೆಳೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಸಂಸ್ಕೃತಿಯನ್ನು ಹೊರತುಪಡಿಸಿ ಭಾಷೆಯ ಬೆಳವಣಿಗೆ ಸಾಧ್ಯವಿಲ್ಲ. ಬೆಳವಣಿಗೆಯಾದಂತೆ ಸಮಾಜವನ್ನು ರೂಪಿಸಿಕೊಂಡ ಮಾನವ ತನ್ನ ಸಮಾಜದಲ್ಲಿ ರೂಢಿಸಿಕೊಂಡು ಬಂದ ಸಂಪ್ರದಾಯ, ಆಚರಣೆ, ರೀತಿ ರಿವಾಜುಗಳೊಂದಿಗೆ ಸಂಸ್ಕೃತಿಯನ್ನು ವಿಕಾಸಗೊಳಿಸಿದ.




ಭಾಷೆಯೊಂದಿಗೆ ಮಾನವನ ಬುದ್ಧಿ ವೃದ್ಧಿ ಗೊಂಡಂತೆ ಆತನ ಸಂಸ್ಕೃತಿಯು ಸಹ ಬೆಳೆಯುತ್ತಾ ಬಂದಿತು. ಇದರ ವಿಸ್ತಾರ ಕೇವಲ ಯಾವುದೋ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ ಕಲೆ, ಧಾರ್ಮಿಕ, ವಿಜ್ಞಾನ, ಸಾಹಿತ್ಯ - ಹೀಗೆ ಅನೇಕ ಕ್ಷೇತ್ರಗಳನ್ನು ಒಳಗೊಂಡು ರೂಪುಗೊಂಡಿತು. ಆದ್ದರಿಂದ ಭಾಷೆಯು ಸಂಸ್ಕೃತಿಯ ವಿಶಿಷ್ಟ ಹೆಗ್ಗುರುತು ಎಂದೆ ಹೇಳಬಹುದು. ನಮ್ಮ ಕನ್ನಡ ಭಾಷೆ ಮತ್ತು ಸಂಸ್ಕೃತಿಯು ಎಷ್ಟು ವೈವಿಧ್ಯಪೂರ್ಣವಾದುದು ಎಂಬುದನ್ನು ಕದಂಬರ ಕಾಲದಿಂದಲೂ ಪರಿಗಣಿಸುತ್ತಾ ಬಂದರೆ ಇಲ್ಲಿ ಆಳ್ವಿಕೆ ನಡೆಸಿದ ಪ್ರತಿಯೊಂದು ರಾಜಮನೆತನವು ಸಾಹಿತ್ಯ ,ಸಂಗೀತ, ಕಲೆ, ವಿಜ್ಞಾನ ಧಾರ್ಮಿಕ ಮುಂತಾದ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಎಷ್ಟು ಮಹತ್ವಪೂರ್ಣದ್ದು, ವೈವಿಧ್ಯಪೂರ್ಣದ್ದು ಎಂಬುದು ತಿಳಿದುಬರುತ್ತದೆ. ಇಲ್ಲಿನ ಸಾಹಿತ್ಯ ಕಲೆ ವಾಸ್ತುಶಿಲ್ಪಗಳಿಗೆ ವಿದೇಶಿಯರು ಸಹ ಮನಸೋತಿರುವುದನ್ನು ಸ್ಮರಿಸಬಹುದು. ನಮ್ಮ ನಾಡು ಶ್ರೀಮಂತ ಸಂಸ್ಕೃತಿಯನ್ನು ಹೊಂದಿದೆ ಎಂಬುದು ನಮ್ಮ ಹೆಮ್ಮೆಯ ಗುರುತಾಗಿದೆ.



ಕನ್ನಡ ಭಾಷೆಯ ಪ್ರಾರಂಭದಲ್ಲೇ ಜೈನ ಬರಹಗಾರರು ಮೂಲತಹ ಪ್ರಾಕೃತದಲ್ಲಿ ಬರೆದು ನಂತರ ಸಂಸ್ಕೃತದಲ್ಲಿ ಅನಂತರ ಆದಿಕವಿ ಪಂಪನಿಂದ ಪ್ರಾರಂಭವಾದ ಪುಲಿಗೆರೆಯ ಕನ್ನಡದಲ್ಲಿ ಪ್ರಾರಂಭವಾದ ಕನ್ನಡ ಸಾಹಿತ್ಯ ಕಾವೇರಿ ನದಿಯಂತೆ ಜೀವ ಸೆಲೆಯಾಗಿ ಹೇರಳವಾಗಿ ಹರಿಯುತ್ತಾ ಬಂದಿದೆ. ಭಾರತದ ಯಾವ ಭಾಷೆಗೂ ಸರಿಸಾಟಿ ಇಲ್ಲ ಎಂಬಂತೆ ಅನೇಕ ಸಾಹಿತಿಗಳನ್ನು ತನ್ನ ಒಡಲಲ್ಲಿಟ್ಟುಕೊಂಡು ಬೆಳೆಸುತ್ತಾ ಬಂದಿದೆ. ನಮ್ಮ ಕನ್ನಡ ನಾಡು ನಮ್ಮ ಭಾಷೆಯು  ಕನ್ನಡಿಗರನಷ್ಟೇ ಅಲ್ಲ, ಅನ್ಯಭಾಷೆಯ ಕವಿಗಳನ್ನು ಸಹ ಸೂಜಿಗಲ್ಲಿನಂತೆ ಸೆಳೆದು ಮಡಿಲಲ್ಲಿ ತಾವು ನೀಡಿ ಬೆಳೆಸಿದೆ ಬೆಳೆಸುತ್ತಿದೆ ಎಂಬುದು ಸಹ ಹೆಮ್ಮೆಯ ವಿಷಯ. ಮಾಸ್ತಿ, ಬೇಂದ್ರೆ, ಕಾರ್ನಾಡರು, ಡಿವಿಜಿ, ನಿಸಾರ್ ಅಹಮದ್ - ಹೀಗೆ ಮುಂತಾದ ಭವ್ಯ ಕವಿಗಳ ಮಾತೃಭಾಷೆ ಮತ್ತು ಸಂಸ್ಕೃತಿ ಬೇರೆಬೇರೆಯಾದರು ಸಹ ಅವರುಗಳು ನೀಡಿದ ಕೊಡುಗೆ ಮಾತ್ರ ಅವಿಸ್ಮರಣೀಯ. ಇಂತಹ ಅನೇಕ ಉದಾಹರಣೆಗಳು ನಮಗೆ ಇಲ್ಲಿ ಕಾಣಸಿಗುತ್ತವೆ. ಇದರಿಂದಲೇ ತಿಳಿಯಬಹುದು ನಮ್ಮ ಭಾಷೆಯ ಆಕರ್ಷಣೆ ಎಂತಹದ್ದೆಂದು. ನಮ್ಮ ಸಂಸ್ಕೃತಿಯ ಕ್ಷೇತ್ರ ವೈವಿಧ್ಯಪೂರ್ಣ ಹಾಗೆಯೇ ಸಂಕೀರ್ಣವಾದದ್ದು ಕೂಡ ಸಂಸ್ಕೃತಿಯ ಕುರಿತು ಅನೇಕ ಮಹನೀಯರು ಗ್ರಂಥಗಳನ್ನೇ ರಚಿಸಿದ್ದಾರೆ. ನಮ್ಮ ನಾಡಿನಲ್ಲಿ ಜೀವಿಸುವ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ತನ್ನದೇ ಆದ ಸಂಸ್ಕೃತಿಯ ಚೌಕಟ್ಟಿನಲ್ಲಿಯೇ ಬದುಕುತ್ತಿದ್ದಾರೆ. ನಮ್ಮ ಸಂಸ್ಕೃತಿ ದೇಶ- ವಿದೇಶಗಳತ್ತ ಅದರ ಹರಿವು ಸಾಗಿರುವುದು ನಮ್ಮ ನಾಡಿನ ಸಂಸ್ಕೃತಿಯ ಮಹತ್ವಪೂರ್ಣ ಸಂಗತಿ.

ನಮ್ಮ ನಾಡಿನಲ್ಲಿ ಶಿಕ್ಷಣದ ಪ್ರಭಾವವನ್ನಾಗಲಿ ಸಾಹಿತ್ಯದ ಮಹತ್ವವನ್ನಾಗಲೀ ಸಭ್ಯ ಜನರ ಗುಣಶೀಲಗಳನ್ನಾಗಲೀ ಕುರಿತು ಮಾತನಾಡುವ ಸಂದರ್ಭದಲ್ಲಿ "ಸಂಸ್ಕೃತಿ" ಎಂಬ ಪದವನ್ನು ಸೇರಿಸಿಕೊಂಡೆ ಬಳಕೆ ಮಾಡುತ್ತೇವೆ. ಸಂಸ್ಕಾರದಿಂದ ಸಂಸ್ಕೃತಿ ಸಂಸ್ಕೃತನ ಗುಣ ಸಂಪತ್ತು ಸಂಸ್ಕೃತಿ ಎಂದು ಹೇಳಬಹುದು. ಸಂಸ್ಕೃತಿ ಎಂಬ ಪದವು ನಮ್ಮ ಭಾಷೆಯಷ್ಟೇ ಪ್ರಾಚೀನ

ಪದವಾಗಿದೆ. ಆದರೆ, ಪೂರ್ವದಲ್ಲಿ ಅದನ್ನು 'ಸಂಸ್ಕಾರ'ಎಂಬ ಅರ್ಥದಲ್ಲೇ ಬಳಸಿದ್ದಾರೆ ಅಷ್ಟೆ.ಒಟ್ಟಿನಲ್ಲಿ ಭಾಷೆ ಬೆಳೆದು ಬಂದಂದೇ ಜೊತೆಜೊತೆಯಾಗಿ ಸಂಸ್ಕೃತಿ ಸಹ ಮಾನವನ ಜೀವನದಲ್ಲಿ ಹಾಸುಹೊಕ್ಕು ನಾಗರಿಕತೆಯ ಹಂತವಾಗಿ ಒಂದು ಸಾಮಾಜಿಕ ವ್ಯವಸ್ಥೆಯೊಳಗಿನ ಜನತೆಯ ವಿಶಿಷ್ಟ ಸಾಧನವಾಗಿ, ಭಾಷೆಯಂತೆ ಸಂಸ್ಕೃತಿಯು ಸಹ ತನ್ನ ಪರಿಮಳವನ್ನು ಎಲ್ಲೆಡೆ ಪಸರಿಸುತ್ತಿದೆ. ಭಾಷೆ ಕಲಿತ ಮಾನವ ಹೇಗೆ ಬೌದ್ಧಿಕ ಪ್ರಬುದ್ಧತೆಗೆ ಅದನ್ನು ಬಳಸಿಕೊಳ್ಳುತ್ತಾ ಜ್ಞಾನ ಸಂಪಾದನೆಗೆ ಹಲವಾರು ಮಾರ್ಗಗಳನ್ನು ಕಂಡುಕೊಳ್ಳುತ್ತಾ ಅದರಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸುತ್ತಾ ಬಂದಿದ್ದಾನೋ ಹಾಗೆಯೇ ಅದರ ಜೊತೆಜೊತೆಗೆ ಕೂಸು ಹುಟ್ಟಿದ ನಂತರದಿಂದ ಅದು ಸತ್ತನಂತರವೂ ಸಹ ಅನೇಕ ರೀತಿ ರಿವಾಜುಗಳನ್ನು ನಡೆಸುವ ಏಕೈಕ ಪ್ರಾಣಿ ಎಂದರೆ ಮನುಷ್ಯ. ಆದ್ದರಿಂದ ವ್ಯಕ್ತಿಯ ಬೆಳವಣಿಗೆ ಮತ್ತು ವಿಕಾಸದ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಅಂಶಗಳೆರಡೂ ಕೂಡಿ ಪರಿಣಾಮ ಬೀರುತ್ತವೆ ಎಂದು ಹೇಳಬಹುದು.

ನಮ್ಮ ಕನ್ನಡ ಭಾಷೆಯು ಕ್ರಿಸ್ತಶಕ ಹದಿನೆಂಟನೇ ಶತಮಾನದ ವೇಳೆಗೆ ವಿಪುಲವಾದ ಸಾಹಿತ್ಯವನ್ನು ಒಳಗೊಂಡು ಒಂದು ಮಹತ್ತರವಾದ ಘಟ್ಟವನ್ನು ತಲುಪಿತೆಂದು ಹೇಳಬಹುದು. ಚಂಪೂವಿನಿಂದ ಪ್ರಾರಂಭವಾದ ಸಾಹಿತ್ಯ ಬೆಳವಣಿಗೆ ಹನ್ನೆರಡನೆಯ ಶತಮಾನದ ವೇಳೆಗೆ ತನ್ನದೇ ಆದ ಮಹತ್ವದ ತಿರುವು ಪಡೆದು, ಕೇವಲ ವಿದ್ವಜ್ಜನರಿಗೆ ಮಾತ್ರ ಮೀಸಲಾಗಿದ್ದ ಸಾಹಿತ್ಯ ಸಾಮಾನ್ಯ ಜನರನ್ನು ತಲುಪುಷ್ಟವರೆ ಮಟ್ಟಿಗೆ ಬದಲಾವಣೆ ಕಂಡುಕೊಂಡದ್ದು ಮಹತ್ವಪೂರ್ಣ ಘಟ್ಟವೆನ್ನಬಹುದು. ಯಾವಾಗ ಕನ್ನಡ ಸಾಹಿತ್ಯದ ಭಾಷೆಯಲ್ಲಿ ಬದಲಾವಣೆ ಕಂಡು ಬಂದು ಸಾಮಾನ್ಯ ಜನರನ್ನು ತಲುಪಿತೋ, ಅಂದಿನಿಂದ ಸಾಹಿತ್ಯದ ವಿಪುಲ ಬೆಳವಣಿಗೆಗೆ ಅವಕಾಶವಾಗಿ ನಮ್ಮ ಕನ್ನಡ ಸಾಹಿತ್ಯ ಶ್ರೀಮಂತವಾಯಿತು ಎನ್ನಬಹುದು. ಚಂಪು, ರಗಳೆ, ತ್ರಿಪದಿ, ಸಾಂಗತ್ಯ ಇತ್ಯಾದಿ ಲಕ್ಷಣಗಳೊಂದಿಗೆ ಮೂಡಿಬಂದ ಕನ್ನಡ ಸಾಹಿತ್ಯ ಹದಿನೆಂಟನೆಯ ಶತಮಾನದ ವೇಳೆಗೆ ಅನ್ಯಭಾಷಾ ಪ್ರಭಾವಕ್ಕೂ ಒಳಗಾಗಿ ಅನುವಾದಕ್ಕೆ ಎಡೆಮಾಡಿಕೊಟ್ಟಿತು. ಬಿಎಂಶ್ರೀ, ಹಟ್ಟಿಯಂಗಡಿ ನಾರಾಯಣರು, ಗಳಗನಾಥರು, ಬಿ. ವೆಂಕಟಾಚಾರ್ಯರು - ಮುಂತಾದವರಿಂದ ಪ್ರಾರಂಭವಾದ ಅನುವಾದ ಸಾಹಿತ್ಯ ಸ್ವಂತಿಕೆಯನ್ನು ಬಿಟ್ಟುಕೊಡದೆ ತನ್ನದೇ ವಿಶಿಷ್ಟ ಛಾಪು ಮೂಡಿಸಿ ಪರಭಾಷಾ ಸಾಹಿತ್ಯದ ಸವಿರುಚಿಯನ್ನು ಸಹ ಸಾಹಿತ್ಯದ ಮನಸುಗಳಿಗೆ ಉಣಬಡಿಸಿದರೆಂದು ಹೇಳಬಹುದು. ಸಾಹಿತ್ಯದೊಂದಿಗೆ ಬೆಳೆದು ಬಂದ ಸಂಸ್ಕೃತಿಯು ಪಾಶ್ಚಾತ್ಯ ಸಂಸ್ಕೃತಿಯನ್ನು ತನ್ನೊಂದಿಗೆ ಕರೆತಂದಿತು ಎಂದರೆ ತಪ್ಪಾಗಲಾರದು. ನಮ್ಮ ಸಂಸ್ಕೃತಿಯ ಪರದೇಶಗಳಲ್ಲಿ ಕಾಲಿಟ್ಟಂತೆ ಅನ್ಯ ಸಂಸ್ಕೃತಿಯು ಸಹ ನಮ್ಮ ನಾಡಲ್ಲಿ ಕಾಲಿಟ್ಟಿತು. ಆದರೆ ಏನೇ ಆಗಲಿ ಏನೇ ಬರಲಿ ನಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಅಲುಗಾಡಿಸಲು ಇಂದಿಗೂ ಯಾರಿಂದಲೂ ಯಾವ ಸಂಸ್ಕೃತಿಯಿಂದಲೂ ಸಾಧ್ಯವಾಗಿಲ್ಲ. ಇದು ನಮ್ಮ ಭಾಷೆ ಮತ್ತು ಸಂಸ್ಕೃತಿಗಿರುವ ತಾಕತ್ತು. ಆಲದ ಮರದಂತೆ ಆಳವಾಗಿ ಬೇರೂರಿ ತನ್ನ ರೆಂಬೆ-ಕೊಂಬೆಗಳನ್ನು ವಿಸ್ತಾರವಾಗಿ ಚಾಚಿ ಅನ್ಯಭಾಷೆ ಸಂಸ್ಕೃತಿಯನ್ನು ಕೈ ಬೀಸಿ ಕರೆಯುತ್ತಾ ತಾನು ನೆರಳು ನೀಡಿದೆಯೇ ಹೊರತು ತನ್ನತನವನ್ನು ಮಾತ್ರ ಬಿಟ್ಟುಕೊಟ್ಟಿಲ್ಲ ಎನ್ನಬಹುದು. ಒಟ್ಟಿನಲ್ಲಿ ಭಾಷೆ ಮತ್ತು ಸಂಸ್ಕೃತಿ ಎರಡು ಮುಖಗಳಂತೆ ಒಂದನ್ನೊಂದು ಒಳಗೊಂಡು ಬೆಳೆಯುತ್ತಾ ಬಂದಿವೆ. ಕನ್ನಡಕ್ಕೆ ಕನ್ನಡವೇ ಸರಿಸಾಟಿ ಎಂಬಂತೆ ನಮ್ಮ ನಾಡಿನ ಸಂಸ್ಕೃತಿಗೂ ಸಹ ತನ್ನದೇ ವೈಶಿಷ್ಟ್ಯತೆ ಇರುವುದು ನಮ್ಮೆಲ್ಲರ ಹೆಮ್ಮೆ ಮತ್ತು ಹೆಗ್ಗಳಿಕೆ ಎಂದೇ ಹೇಳಬಹುದು.


**College Reopens– Even Semester**

Adhering to the University of Mysore’s guidelines, students of the 2nd and 3rd years of BBA, BCA and BCom were instructed to present themselves at the college on the 16th of May 2022 for resumption of classes.

Adhering to the University of Mysore’s guidelines, the 1st years of BBA, BCA and BCom were instructed to return to college on the 26th of May 2022, for the resumption of classes of the even semester.

**Workshop on Cyber security and Blockchain**

Amrita Vishwa Vidyapeetam (Mysore Campus) along with IEEE Bangalore section organized a two-day, hands-on workshop on Cyber security and blockchain Technology on the 27th and the 28th of May 2022. The resource persons for this workshop were Dr. Gururaj H.L, Associate Professor, Vidyavardhaka College of Engineering and Mr. Sunil Kumar, Assistant Professor, Vidyavardhaka College of Engineering. Five of our final year BCA students- Jennifer Nancy, Rachana, Sukrutha, Suman, and Usha along with our faculty Ms. Vedapriya P, Assistant professor, Dept of Computer Application attended the workshop.



Block chain and Cyber security is an emerging technology which is mainly based on Network security. On 27th May, the workshop participants were introduced to cyber security and Kali Linux. As it was a hands-on session, all the participants were asked to implement various network commands in the personal computer provided to them. It was a useful and fulfilling session for our students.

On 28th May, Dr Gururaj conducted the session. He introduced blockchain technology which was a new topic to most of the participants. Later, he explained about the application of this technology in real life which may prove useful to our students.

**Oath taking against terrorism**





To combat rising cases of radicalism in the country, the Principal, Dr. Rakesh T. S advised the students in an assembly on the 21st of May 2022. Ms. Ranjitha, Physical Instructor, Dept of Physical Education and Sports, GSSS SSFGC led the students in an oath taking ceremony against terrorism. The students swore to uphold the Constitution, and never engage or entertain anti national activities.

**Anti-Tobacco Day – 31st May**





As part of an awareness campaign against tobacco usage, the Principal Dr. Rakesh T.S addressed an assembly on the 31st of May 2022 and gave a speech on the real-life dangers of tobacco usage. Mr. Ankaraju, Asst Librarian directed a play, with the actors being student members from the 1st and 2nd years of BCA showcasing the real-life dangers of tobacco. In the play, the dangers of tobacco usage were seen as several characters died due to consumption of tobacco in various

forms. The event was organized by Ms. Ranjitha, Physical Education Instructor, Dept of Physical Education and Sports, GSSS SSFGC, as a part of NSS activities.


The Principal, Dr. Rakesh T. S planted a tree on the college premises to promote greenery and discourage pollution from smoking cigarettes and chewing tobacco.

**Essay Competition**

Anti- Tobacco Day observance was followed by an essay competition with subject being - Harmful effects of tobacco consumption. It was judged by Mr. Simha Y N, Asst Prof, Dept of English, and Ms. Rashmi C R, Asst Prof, Dept of Kannada. The winners were Varshitha A (IV Sem BCA), who took 1st place and Anusha (IV Sem BCom), who took 2nd place in the Kannada essay competition, and Sanjana K R (II Sem BCom), who took 1st place, and Chandana M S (IV Sem BCA) who took 2nd place. This was conducted by Ms. Ranjitha, Physical Education Instructor, Dept of Physical Education and Sports, GSSS SSFGC. This was a part of NSS activities.

**"Jai Jawan! Jai Kisan!"**

**- Lal Bahadur Shastri**



Lal Bahadur Shastri – Prime Minister of India (1964-66)